# ದೇವರ ರಾಜ್ಯದ ಬೆಳವಣಿಗೆಯನ್ನು ಏಕೆ ಬಯಸುತ್ತೀರಿ?

ದೇವರ ರಾಜ್ಯವು, ವಿಶೇಷವಾಗಿ ಪಾಪಿಗಳನ್ನು ರಕ್ಷಿಸಲ್ಪಡುವುದರಲ್ಲಿ ದೇವರು ರಾಜನಾಗಿ ಆಳ್ವಿಕೆ ಮಾಡುವಂಥದ್ದಾಗಿದೆ. ಹಾಗಾದರೆ ದೇವರ ರಾಜ್ಯದ ಅಭಿವೃದ್ಧಿಯನ್ನು ಏಕೆ ಬಯಸಬೇಕು? ಇಲ್ಲಿ ನಾಲ್ಕು ಉತ್ತರಗಳು ಕೊಡಲ್ಪಟ್ಟಿರುತ್ತದೆ.

**ಯೇಸುವು ತನ್ನ ಹಿಂಬಾಲಕರಿಗೆ ಶಿಷ್ಯರನ್ನಾಗಿ ಮಾಡುವ ಆಜ್ಞೆಯನ್ನು ಕೊಟ್ಟಿರುತ್ತಾನೆ.**

ಮತ್ತಾಯ 28:18–20:

> ಆಗ ಯೇಸು ಹತ್ತರಕ್ಕೆ ಬಂದು, "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಅವರಿಗೆ ದೀಕ್ಷಾಸ್ನಾನ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದನ್ನೆಲ್ಲಾ

> ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ,ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.”

ಯೇಸುವು ತನ್ನ ಹಿಂಬಾಲಕರಿಗೆ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡುವ, ದೀಕ್ಷಾಸ್ನಾನ ಮಾಡಿಸುವ ಹಾಗೂ ಆತನು ಉಪದೇಶಿಸಿರುವವುಗಳನ್ನೆಲ್ಲಾ ಕೈಗೊಂಡು ನಡೆಯಲು ಜವಾಬ್ದಾರಿಗಳನ್ನು ಅನುಗ್ರಹಿಸಿದ್ದಾನೆ. ಇದುವೇ ಆತನ ಪ್ರತೀ ಹಿಂಬಾಲಕರುಗಳ ವಿಷಯವಾಗಿ ಇರುವ ಆತನ ಚಿತ್ತವಾಗಿದೆ.

## ಎಲ್ಲರೂ ರಕ್ಷಿಸಲ್ಪಡಬೇಕೆಂದು ದೇವರು ಬಯಸುತ್ತಾನೆ.

2 ಪೇತ್ರ 3:9:

> ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕಾಗಿ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೇ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿವುಳ್ಳವನಾಗಿದ್ದಾನೆ.

ಕರ್ತನು ತನ್ನ ಸಭೆಯೊಂದಿಗೆ ತಾಳ್ಮೆಯಿಂದಿರುವವನಾಗಿದ್ದಾನೆ. ಯಾರೊಬ್ಬರೂ ನಾಶವಾಗದೇ ಎಲ್ಲರೂ ರಕ್ಷಿಸಲ್ಪಡಬೇಕೆಂದು ಬಯಸುವವನಾಗಿದ್ದಾನೆ. ದೇವರು ತನ್ನ ಅನುಯಾಯಿಗಳು ನಂಬುವವರೆಲ್ಲರಿಗೂ ರಕ್ಷಣೆಗೆ ಬಲವಾಗಿರುವ ಯೇಸುವಿನ ವಿಷಯವಾದ ಸುವಾರ್ತೆಯನ್ನು ಸಾರಬೇಕೆಂದು ಕಾಲಾವಕಾಶವನ್ನು ಕೊಟ್ಟಿರುತ್ತಾನೆ.

**ಎಲ್ಲಾ ದೇಶ, ಕುಲ, ಜನ, ಭಾಷೆಗಳವರು ಪರಲೋಕದಲ್ಲಿರಬೇಕೆಂದು ದೇವರು ವಾಗ್ದಾನವನ್ನು ಮಾಡಿದ್ದಾನೆ.**



ಪ್ರಕಟನೆ 7:9–10:

> ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವುದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು.

ಅವರು – ಸಿಂಹಾಸನಾಸೀನನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ ಎಂದು ಮಹಾ ಶಬ್ದದಿಂದ ಕೂಗಿದರು.

ಆತನ ಅನುಯಾಯಿಗಳ ಸುವಾರ್ತೆ ಸಾಕ್ಷಿಯ ಮೂಲಕ ಅನೇಕರು ರಕ್ಷಿಸಲ್ಪಡುತ್ತಾರೆ ಎಂಬ ನಂಬಿಕೆಯನ್ನು ನಾವು ಹೊಂದ ಬಹುದು ಏಕೆಂದರೆ ದೇವರು ಅದನ್ನು ವಾಗ್ದಾನ ಮಾಡಿದ್ದಾನೆ.

**ತುರ್ತಾಗಿ ಜನರು ಬಲು ಬೇಗನೆ ರಕ್ಷಿಸಲ್ಪಡಬೇಕಾಗಿರುವುದು.**



ಬೆಂಗಳೂರು ನಗರದ ಅಂದಾಜುಗಳು ಮಾತ್ರವೇ ಇಲ್ಲಿವೆ:

| | |
|---|---|
| ಒಟ್ಟು ಜನಸಂಖ್ಯೆ | 1.3 ಕೋಟಿ ಜನಗಳು |
| ಜನನ ಪ್ರಮಾಣ | ಒಂದು ದಿನದಲ್ಲಿ 509 ಜನಗಳು |
| ಮರಣ ಪ್ರಮಾಣ | ಒಂದು ದಿನದಲ್ಲಿ 174 ಜನಗಳು |
| ಉಳಿಸಲಾಗದ ಶೇಕಡಾ | 94% |
| ಉಳಿಸಲಾಗದ ಮರಣ ಪ್ರಮಾಣ | ಘಂಟೆಗೆ 7 ಜನಗಳು |

ಬೆಂಗಳೂರಿನಲ್ಲಿ ಜನಸಂಖ್ಯೆ ವೇಗವಾಗಿ ಹೆಚ್ಚಾಗುತ್ತಿದೆ, ಮತ್ತು ಈ ನಗರದಲ್ಲಿ ಪ್ರತೀ ಘಂಟೆಗೆ 7 ಮಂದಿಯು ಯೇಸುವಿನ ಶುಭ ಸಂದೇಶವನ್ನು ನಂಬದೇ ಸಾಯುತ್ತಿದ್ದಾರೆ. ನೀವು ಜಗತ್ತನ್ನು ಒಟ್ಟಾರೆಯಾಗಿ ಪರಿಗಣಿಸಿದರೆ, ಪ್ರತಿ ಸೆಕೆಂಡಿಗೆ ಸುಮಾರು 2 ಜನರು ಯೇಸುವಿನ ಸುವಾರ್ತೆಯನ್ನು ನಂಬದೆ ಸಾಯುತ್ತಾರೆ. ಯೇಸುವಿನ ಏಕೈಕ ಹೆಸರನ್ನು ಮತ್ತು ಆ ಹೆಸರಿನಿಂದಲೇ  ನಾವು ರಕ್ಷಿಸಲ್ಪಡುತ್ತೇವೆ ಎಂಬ ಸಂದೇಶವನ್ನು ಸಾರುವುದರಲ್ಲಿ ನಾವು ದೇವರಿಗೆ ವಿಧೇಯರಾಗಲು ಕಾಯಬಾರದು.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

2011 ರ ಜನಗಣತಿ ಮತ್ತು ದಿ ವರ್ಲ್ಡ್ ಫ್ಯಾಕ್ಟ್‌ಬುಕ್‌ನ ದತ್ತಾಂಶಗಳ ಆಧಾರದ ಮೇಲೆ ಜನಸಂಖ್ಯೆಯ ದತ್ತಾಂಶದ ಅಂದಾಜುಗಳನ್ನು ಲೆಕ್ಕಹಾಕಲಾಗುತ್ತದೆ. ಸಂಬಂಧಿತ ಡೇಟಾವನ್ನು **censusindia.gov.in**, **www.censuskarnataka.gov.in**, ಮತ್ತು **www.cia.gov/the-world-factbook** ನಲ್ಲಿ ಪ್ರಡೆಯಬಹುದು.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.